ಸೇತುವೆಗಳ ನಿರ್ಮಾಣ

523 (644) ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ರಾಜ್ಯದಲ್ಲಿ ನಿರ್ಮಾಣ ಮಾಡಲಾಗಿರುವ ಸೇತುವೆಗಳೆಷ್ಟು? ಆ ಸೇತುವೆಗಳು ಪೂರ್ಣಗೊಂಡಿರುವುದೇ?

ಆ) ಕಾಪು ವಿಧಾನಸಭಾ ಕ್ಷೇತ್ರದ ಬೆಳ್ಳಂಪಳ್ಳಿ ಪರೀಕ ಮತ್ತು ಹಿರೇಡ್ಕ ಸೇತುವೆ ನಿರ್ಮಾಣದ ಬಗ್ಗೆ ಪ್ರಸ್ತಾವನೆ ಇದ್ದರೂ ಕೂಡ ಇದುವರೆವಿಗೂ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು?

ಇ) ಬೆಳ್ಳಂಪಳ್ಳಿ ಪರೀಕ ಮತ್ತು ಹಿರೇಡ್ಕ ಸೇತುವೆ ನಿರ್ಮಾಣದ ಅಂದಾಜು ಮೊತ್ತವೆಷ್ಟು?

ಈ) ಈ ಸೇತುವೆಯನ್ನು ಎಂದು ಪ್ರಾರಂಭಿಸಲಾಗುವುದು ಹಾಗೂ ಅಂತರರಾಷ್ಟ್ರೀಯ ಮಟ್ಟದ ಮಣಿಪಾಲ್ ನಗರಕ್ಕೆ ಜನರು ಉದ್ಯೋಗ ಅರಸಿ ಮತ್ತು ವಿದ್ಯಾರ್ಥಿಗಳು ದಿನನಿತ್ಯ 500 ರಿಂದ 600 ಜನ ದೋಣಿಯಲ್ಲಿ ಈ ನದಿಯನ್ನು ದಾಟಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) 2009–10ನೇ ಸಾಲಿನ ರಾಜ್ಯದಲ್ಲಿ ನಿರ್ಮಾಣ ಮಾಡಲಾಗಿರುವ ಸೇತುವೆಗಳ ವಿವರ :

	ತೆಗೆದು ಕೊಂಡಿರುವ ಸೇತುವೆಗಳು	ಪೂರ್ಣ ಗೊಂಡಿರುವ ಸೇತುವೆಗಳು	ಬಾಕಿ ಇರುವ ಸೇತುವೆಗಳು
ಕೆ.ಆರ್.ಡಿ.ಸಿ.ಎಲ್	60	60	–
ಮುಖ್ಯ ಇಂಜಿನಿಯರ್ (ದಕ್ಷಿಣ) ಬೆಂಗಳೂರು	33	1	32
ಮುಖ್ಯ ಇಂಜಿನಿಯರ್ (ಉತ್ತರ) ಧಾರವಾಡ	16	2	14
ಒಟ್ಟು	109	63	46

ಆ) ಬೆಳ್ಳಂಪಳ್ಳಿ ಪರೀಕ ಮತ್ತು ಹಿರೇಡ್ಕ ಸೇತುವೆ ನಿರ್ಮಾಣವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಲ್ಲಿನ ಅನುದಾನದ ಕೊರತೆಯಿಂದ ಸಧ್ಯಕ್ಕೆ ಸ್ಥಗಿತಗೊಳಿಸಿದ್ದು, ಮುಂದಿನ ವರ್ಷಗಳಲ್ಲಿ ಅನುದಾನದ ಲಭ್ಯತೆ ಆಧರಿಸಿ ಕೈಗೊಳ್ಳಲಾಗುವುದು.

ಇ)

1. ಬೆಳ್ಳಂಪಳ್ಳಿ ಪರೀಕ ಸೇತುವೆಯ ಅಂದಾಜು ರೂ.527 ಲಕ್ಷಗಳು.
2. ಕೊಕ್ಕಾಮೆ–ಬಜೆ–ಹಿರಿಯಡ್ಕ ಸೇತುವೆಯ ಅಂದಾಜು ರೂ.521 ಲಕ್ಷಗಳು.

ಈ) ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ನದಿಯನ್ನು ದಾಟಲು ಆಗುತ್ತಿರುವ ಸಮಸ್ಯೆ ಇಲಾಖಾ ಗಮನಕ್ಕೆ ಬಂದಿರುತ್ತದೆ. ಮುಂದಿನ ಸಾಲುಗಳಲ್ಲಿ ಅನುದಾನದ ಲಭ್ಯತೆ ಆಧರಿಸಿ, ಆಧ್ಯತೆ ಮೇಲೆ ಪ್ರಾರಂಭಿಸ ಲಾಗುವುದು.

ಉ) ಸರ್ಕಾರವು ದಿನಾಂಕ: 03–12–2008ರಲ್ಲಿ ಸದರಿ ಸೇತುವೆ ಕಾಮಗಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ತೆಗೆದುಕೊಳ್ಳಲು ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಯೋಜನೆಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸುವ ಕಾರ್ಯವನ್ನು ಮೆ: ಸಿವಿಲ ಏಡ್, ಬೆಂಗಳೂರುರವರಿಗೆ ದಿನಾಂಕ: 16–03–2009ರಲ್ಲಿ ವಹಿಸಲಾಗಿರುತ್ತದೆ. ಸಮಾಲೋಚಕರು ಈ ಕಾಮಗಾರಿಯ ಯೋಜನಾ ವರದಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಮುಂದಿನ ಸಾಲುಗಳಲ್ಲಿ ಅನುದಾನದ ಲಭ್ಯತೆ ಆಧರಿಸಿ, ಆಧ್ಯತೆ ಮೇಲೆ ಸೇತುವೆಯನ್ನು ತೆಗೆದುಕೊಳ್ಳ ಲಾಗುವುದು.

ವಿಜಯನಗರ ಕ್ಷೇತ್ರದಲ್ಲಿ ಬಿ.ಪಿ.ಎಲ್. ಕಾರ್ಡ್ ವಿತರಣೆ ವಿಳಂಬ

524 (652) ಶ್ರೀ ಎಂ.ಕೃಷ್ಣಪ್ಪ (ವಿಜಯನಗರ ಕ್ಷೇತ್ರ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಯನಗರ ಮತಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕಡು ಬಡವರಿಗೆ ಬಿಪಿಎಲ್ ಕಾರ್ಡ್ ವಿತರಿಸಲಾಗಿದೆ;